**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ873 /2025**

**ಸಿ.ಡಬ್ಲ್ಯೂಃ 13, ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರು : ಸಂಜೀವ

ತಂದೆಯ ಹೆಸರು : ಅಣ್ಣಪ್ಪ ಮರಾಠಿ

ವಯಸ್ಸು : 43 ವರ್ಷ

ಉದ್ಯೋಗ : ಪೊಲೀಸ್ ಆರಕ್ಷಕ, ಭಟ್ಕಳ ನಗರ ಪೊಲೀಸ ಠಾಣೆ

ವಾಸ್ತವ್ಯ : ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 28/01/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ 2021 ನೇ ನವೆಂಬರ್ ತಿಂಗಳಿಂದ ಇವತ್ತಿನವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಭಟ್ಕಳ ಶಹರ ಠಾಣೆಯ ಗುನ್ನಾ ನಂಬರ್ 102/2024 ರಲ್ಲಿ ಸದರಿ ಪ್ರಕರಣದ ಪಂಚನಾಮೆಗಾಗಿ ಚಾಸಾ 20 ರವರು ನನಗೆ ಪೊಟೋ ಹಾಗೂ ವಿಡಿಯೋ ಮಾಡಲು ಕರೆದಿದ್ದು ನಾನು ದಿಃ 03.10.2024 ರಂದು ಮದ್ಯಾಹ್ನ 12.00 ರಿಂದ 1.00 ಗಂಟೆಯವರೆಗೆ ಪ್ರಕರಣದ ಪಂಚನಾಮೆ ಕಾಲಕ್ಕೆ ಪೊಟೋ ತೆಗೆದು ವಿಡಿಯೋ ಮಾಡಿ ಅದನ್ನು ಖಾಸಗಿ ಪೊಟೋ ಸ್ಟೂಡಿಯೋವಾದ ಎಡ್ ಲ್ಯಾಬ್ ದಲ್ಲಿ ಪೊಟೋ ಪ್ರಿಂಟ್ ಹಾಕಿಸಿ ಸಿಡಿ ಮಾಡಿಸಿದ್ದು ಇರುತ್ತದೆ. ಪೋಟೋ ಮಾಡಿದ ಬಗ್ಗೆ ಪ್ರಮಾಣಪತ್ರವನ್ನು ಠಾಣೆಗೆ ನೀಡಿರುತ್ತೇನೆ.

3. ಸಾಕ್ಷಿಯು ನಿಪಿ-2 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯು 63(4) ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 4 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಫ್ ಜಿ ವಕೀಲರಿಂದ,**

ನಾನು ಪೊಟೋಗ್ರಾಫಿ ಹಾಗೂ ವಿಡಿಯೋ ಗ್ರಾಫಿ ಮಾಡಲು ತರಬೇತಿ ಪಡೆದ ಬಗ್ಗೆ ಪ್ರಮಾಣಪತ್ರ ಪಡೆದಿದ್ದು ಇಲ್ಲಾ. ನನ್ನ ಪ್ರಮಾಣಪತ್ರದಲ್ಲಿ ಮೊಬೈಲನ ಹೆಸರನ್ನು ನಮೂದು ಮಾಡಿದ್ದು ಇಲ್ಲಾ . ನಾನು ಖಾಸಗಿ ಲ್ಯಾಬ್ ನಿಂದ ಪೊಟೋ ಹಾಗೂ ಸಿಡಿ ಪಡೆದಿರುತ್ತೇನೆ. ಹಣ ಸಂದಾಯ

ಮಾಡಿದ ಬಗ್ಗೆ ರಶೀದಿಯನ್ನು ನೀಡಿದ್ದು ಇಲ್ಲಾ. ನಾನು ಯಾವುದೇ ಲ್ಯಾಬನಿಂದ ಪೊಟೋ ಹಾಗೂ ಸಿಡಿ ಪಡೆದಿಲ್ಲಾ ಎಂದರೆ ಸರಿಯಲ್ಲಾ. ಸದರಿ ಪ್ರಕರಣಕಾಗ್ಗಿ ಸುಳ್ಳು ಪೊಟೋ ಹಾಗೂ ಸಿಡಿಯನ್ನು ನಮ್ಮ ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪೊಟೋ ತೆಗೆಯುವ ಕಾಲಕ್ಕೆ ಗುನ್ನಾ ಸ್ಥಳದಲ್ಲಿ ಯಾವುದೇ ರಕ್ತದ ಕಲೆಗಳು ಇರಲಿಲ್ಲಾ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**